“ಗುಮಾನಿಯ ಬಗ್ಗೆ ಎಚ್ಚರದಿಂದಿರಿ! ಏಕೆಂದರೆ ಗುಮಾನಿಯು ಅತಿದೊಡ್ಡ ಸುಳ್ಳು ಮಾತಾಗಿದೆ

ಅಬೂ ಹುರೈರ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: “ಗುಮಾನಿಯ ಬಗ್ಗೆ ಎಚ್ಚರದಿಂದಿರಿ! ಏಕೆಂದರೆ ಗುಮಾನಿಯು ಅತಿದೊಡ್ಡ ಸುಳ್ಳು ಮಾತಾಗಿದೆ. ನೀವು ಒಬ್ಬರನ್ನೊಬ್ಬರು ಬೇಹುಗಾರಿಕೆ
ಮಾಡಬೇಡಿ, ಒಬ್ಬರು ಇನ್ನೊಬ್ಬರ ಖಾಸಗಿ ವಿಚಾರಗಳನ್ನು ಕೆದಕಬೇಡಿ, ಒಬ್ಬರನ್ನೊಬ್ಬರು ಅಸೂಯೆ ಪಡಬೇಡಿ, ಒಬ್ಬರಿಗೊಬ್ಬರು ಮುಖ ತಿರುಗಿಸಬೇಡಿ, ಒಬ್ಬರನ್ನೊಬ್ಬರು ದ್ವೇಷಿಸಬೇಡಿ. ಓ ಅಲ್ಲಾಹನ ದಾಸರೇ, ನೀವು ಸಹೋದರರಾಗಿರಿ." [صحيح] [متفق عليه]

ಮುಸ್ಲಿಮರಲ್ಲಿ ಒಡಕು ಮತ್ತು ದ್ವೇಷಕ್ಕೆ ಕಾರಣವಾಗುವ ಕೆಲವು ವಿಚಾರಗಳನ್ನು ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ವಿರೋಧಿಸುತ್ತಾರೆ ಮತ್ತು ಎಚ್ಚರಿಸುತ್ತಾರೆ. ಅವುಗಳಲ್ಲಿ ಕೆಲವು ಹೀಗಿವೆ: ಗುಮಾನಿ: ಅಂದರೆ ಯಾವುದೇ ಆಧಾರವಿಲ್ಲದೆ ಹೃದಯಗಳಲ್ಲಿ ಮೂಡುವ ಕೆಲವು ಆರೋಪಗಳಾಗಿವೆ. ಅವು ಅತಿದೊಡ್ಡ ಸುಳ್ಳು ಮಾತುಗಳಾಗಿವೆಯೆಂದು ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ವಿವರಿಸಿದ್ದಾರೆ. ಬೇಹುಗಾರಿಕೆ: ಅಂದರೆ ಕಣ್ಣು ಮತ್ತು ಕಿವಿಗಳ ಮೂಲಕ ಜನರ ಖಾಸಗಿ ವಿಷಯಗಳನ್ನು ತನಿಖೆ ಮಾಡುವುದು. ಕೆದಕುವುದು: ಅಂದರೆ ಅತ್ಯಂತ ಸೂಕ್ಷ್ಮ ವಿಷಯಗಳನ್ನು ಅನ್ವೇಷಿಸಿ ತಿಳಿಯುವುದು. ಇದು ಹೆಚ್ಚಾಗಿ ಕೆಟ್ಟ ಉದ್ದೇಶಗಳಿಗೆ ಬಳಕೆಯಾಗುತ್ತದೆ. ಅಸೂಯೆ: ಅಂದರೆ ಇತರರಿಗೆ ಒಳಿತುಂಟಾಗುವುದನ್ನು ದ್ವೇಷಿಸುವುದು. ಒಬ್ಬರಿಗೊಬ್ಬರು ಮುಖ ತಿರುಗಿಸುವುದು: ಅಂದರೆ ಒಬ್ಬರು ಇನ್ನೊಬ್ಬರನ್ನು ಕಡೆಗಣಿಸುವುದು, ಸಲಾಂ ಹೇಳದಿರುವುದು ಮತ್ತು ಮುಸ್ಲಿಂ ಸಹೋದರರನ್ನು ಭೇಟಿಯಾಗದಿರುವುದು. ಒಬ್ಬರನ್ನೊಬ್ಬರು ದ್ವೇಷಿಸುವುದು: ಅಂದರೆ ಇಷ್ಟಪಡದಿರುವುದು ಮತ್ತು ಅಸಹ್ಯಪಡುವುದು. ಉದಾಹರಣೆಗೆ, ಇತರರಿಗೆ ತೊಂದರೆ ಕೊಡುವುದು, ಮುಖ ಸಿಂಡರಿಸುವುದು ಮತ್ತು ಕೆಟ್ಟದಾಗಿ ವರ್ತಿಸುವುದು. ನಂತರ ಮುಸಲ್ಮಾನರು ಪರಸ್ಪರ ತಮ್ಮ ಸಂಬಂಧಗಳನ್ನು ಸುಧಾರಿಸಬಹುದಾದ ಸಮಗ್ರ ಆಜ್ಞೆಯನ್ನು ನೀಡುತ್ತಾ ಅವರು ಹೇಳುತ್ತಾರೆ: "ಓ ಅಲ್ಲಾಹನ ದಾಸರೇ, ನೀವು ಸಹೋದರರಾಗಿರಿ." ಸಹೋದರತ್ವವೆಂದರೆ, ಜನರ ನಡುವಿನ ಸಂಬಂಧಗಳನ್ನು ಸರಿಪಡಿಸುವ ಕೊಂಡಿಯಾಗಿದ್ದು, ಅದು ಅವರ ನಡುವೆ ಪ್ರೀತಿ-ವಾತ್ಸಲ್ಯವನ್ನು ಹೆಚ್ಚಿಸುತ್ತದೆ.

https://sunnah.global/hadeeth/kn/show/5332